**ಸಾಕ್ಷಿಗೆ ದಿನಾಂಕಃ 15.06.2026 ರಂದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಜಿ.ಆರ್. ವಕೀಲರಿಂದಃ**

ನಾನು ಪಿ.ಯು..ಸಿ.ತನಕ ಓದಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ದಾವೆಯಲ್ಲಿ ಕೇಳಿರುವ ಪರಿಹಾರದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಾದಪತ್ರವನ್ನು ಮತ್ತು ಪ್ರತಿವಾದ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. 1 ನೇ ಪ್ರತಿವಾದಿ ನಮ್ಮ ತಂದೆ. 5 ನೇ ಪ್ರತಿವಾದಿ ನನಗೆ ಸಹೋದರ. ಟಿ.ನರಸೀಪುರ ತಾಲ್ಲೂಕು, ತಲಕಾಡು ಹೋಬಳಿ, ವಿಜಯಪುರ ಗ್ರಾಮದಲ್ಲಿರುವ ಜಂಜರ್ ಸಂಖ್ಯೆ 33 ಸ್ವತ್ತಿನ ಸಂಖ್ಯೆ 33 ರ ವಿಸ್ತೀರ್ಣ 40x 60 ನಮ್ಮ ತಂದೆಗೆ ಸೇರಿರುತ್ತದೆ ಎಂದರೆ ಸರಿ. ಸದರಿ ಸ್ವತ್ತು ಬಿ.ಶೆಟ್ಟಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಖಾತೆ ಆಗಿರುತ್ತದೆ ಎಂದರೆ ಸರಿ. ನಮ್ಮ ತಂದೆ ಮತ್ತು 5 ನೇ ಪ್ರತಿವಾದಿಯು ದಾವಾ ಸ್ವತ್ತನ್ನು ವಾದಿಗೆ ದಿ.11.11.1999 ರಂದು ಪಂಚಾಯಿತಿ ಕ್ರಯಪತ್ರದಂತೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರವನ್ನು ನಿ.ಪಿ.14 ರಂತೆ ಹಾಜರುಪಡಿಸಿರುತ್ತಾರೆ ಎಂದರೆ ಸಾಕ್ಷಿಯು ಅದನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತಾರೆ ಎಂದು ನುಡಿದಿರುತ್ತಾರೆ. ನಿ.ಪಿ.1 ರಲ್ಲಿ ಸಣ್ಣಯ್ಯ ಜಂಜರ್ ಸಂಖ್ಯೆ33, ಸ್ವತ್ತಿನ ಸಂಖ್ಯೆ 33 ಎಂದು ನಮೂದು ಇರುತ್ತದೆ ಎಂದರೆ ಸರಿ. ಅದರಲ್ಲಿ 20x50 ಎಂದು ನಮೂದು ಇರುತ್ತದೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ಕ್ರಯಪತ್ರದಂತೆ ಖಾತೆ ಮಾಡಲಾಗಿದೆ ಎಂದು ನಮೂದು ಇರುತ್ತದೆ ಎಂದರೆ ಸರಿ.

ನಮ್ಮ ತಂದೆ ಮತ್ತು ಸಹೋದರ ದಾವಾ ಸ್ವತ್ತನ್ನು ಮಾರಾಟ ಮಾಡಿದ ಮೇಲೆ ವಾದಿಯ ಹೆಸರಿಗೆ 2000 ನೇ ಇಸವಿಯಲ್ಲಿ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿ.ಪಿ.1 ನ್ನು ಪ್ರಶ್ನಿಸಿ ಅಪೀಲು ಸಲ್ಲಿಸಿರುವುದಿಲ್ಲ. ವಾದಿಯು ದಾವಾ ಸ್ವತ್ತಿನ ಮಾಲಿಕರಾಗಿದ್ದರಿಂದ ನಿ.ಪಿ.1 ನ್ನು ಪ್ರಶ್ನಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯು ದಾವಾ ಸ್ವತ್ತಿನಲ್ಲಿ 15x20 ಅಡಿ ವಿಸ್ತೀರ್ಣದಲ್ಲಿ ಮನೆಯನ್ನು ನಿರ್ಮಿಸಿ ವಾಸ ಮಾಡುತ್ತಾರೆ ಎಂದರೆ ಸರಿಯಲ್ಲ. ಸದರಿ ಮನೆಯು ನಮಗೆ ಸೇರಿರುತ್ತದೆ. ನಿ.ಪಿ.3 ರಲ್ಲಿ ಪುಟ್ಟಯ್ಯ ರವರ ಹೆಸರನ್ನು ತೆಗೆದು ಸಣ್ಣಮ್ಮನವರ ಹೆಸರು ನಮೂದು ಇರುತ್ತದೆ ಎಂದರೆ ಸರಿ. ವಾದಿಯ ಅನಾರೋಗ್ಯದಿಂದ ಮಗನ ಮನೆಗೆ ಹೋದಾಗ ದಾವಾ ಸ್ವತ್ತಿನಲ್ಲಿ ಇದ್ದ ಮನೆಯನ್ನು ನಾವುಗಳು ಕೆಡವಿಹಾಕಿರುತ್ತೇವೆ ಎಂದರೆ ಸರಿಯಲ್ಲ. ನಿ.ಪಿ.2 ನ್ನು ನಾವುಗಳು ಪಂಚಾಯಿತಿಯವರ ಜೊತೆ ಶಾಮೀಲಾಗಿ ತಿದ್ದುಪಡಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಬಿ.ಶೆಟ್ಟಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ನನ್ನ ಗಂಡ ಗ್ರಾಮಪಂಚಾಯಿತಿಯ ಸದಸ್ಯರಾಗಿರುತ್ತಾರೆ. ನನ್ನ ಗಂಡನು ಸಹ ಗ್ರಾಮಪಂಚಾಯಿತಿಯಲ್ಲಿ ಅಧಿಕಾರವನ್ನು ದುರ್ಬಳಕೆ ಮಾಡಿಕೊಂಡು ಖಾತೆಯನ್ನು ನಮ್ಮ ತಂದೆಯ ಹೆಸರಿಗೆ ತಿದ್ದುಪಡಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಖಾತೆಯನ್ನು ಪ್ರಶ್ನಿಸಿ ವಾದಿಯು ತಾಲ್ಲೂಕು ಪಂಚಾಯಿತಿಯಲ್ಲಿ ಅಪೀಲು ಸಲ್ಲಿಸಿದ್ದರು ಎಂದರೆ ಸರಿ. ನಾವುಗಳು ದಾವಾ ಸ್ವತ್ತಿನಲ್ಲಿ ಅಡಿಪಾಯವನ್ನು ಹಾಕಲು ಹೋದಾಗ ವಾದಿಯು ನಮ್ಮಗಳ ವಿರುದ್ಧ ದೂರು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ದಿ.13.11.2014 ರಂದು ವಾದಿಯು ನಮ್ಮಗಳ ವಿರುದ್ಧ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಠಾಣಾ ಅಧಿಕಾರಿಗಳು ದಿ.14.11.2014 ರಂದು ಹಿಂಬರಹವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ.

ಖಾತೆಯನ್ನು ಸೃಷ್ಟಿ ಮಾಡಿದ ಮೇಲೆ ದಿ.04.12.2012 ರಂದು ನಮ್ಮ ತಂದೆಯಿಂದ ನನ್ನ ಹೆಸರಿಗೆ ದಾನ ಪತ್ರವ ನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ಸಾಕ್ಷಿಯು ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ಪತ್ರ ಆಗಿರುತ್ತದೆ ಎಂದು ನುಡಿದಿರುತ್ತಾರೆ. ನಮ್ಮತಂದೆ ಈಗಾಗಲೇ ದಾವಾ ಸ್ವತ್ತನ್ನು ಮಾರಾಟ ಮಾಡಿದ ಕಾರಣ ಅದನ್ನು ದಾನ ಮಾಡುವ ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪತ್ರವು ಊರ್ಜಿತವಾಗಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ಶಾಂತಿಯ ಸ್ವಾಧೀನಕ್ಕೆ ನಾವುಗಳು ಧಕ್ಕೆ ತಂದಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ಊರಿನಲ್ಲಿ ಪಂಚಾಯಿತಿ ನಡೆದಿರುತ್ತದೆ ಎಂದರೆ ಸರಿಯಲ್ಲ. ನನ್ನ ಗಂಡ ಗ್ರಾಮ ಪಂಚಾಯಿತಿಯಲ್ಲಿ ಸದಸ್ಯನಾಗಿರುವುದರಿಂದ ಪಿ.ಡಿ.ಓ. ರವರ ಜೊತೆ ಶಾಮೀಲಾಗಿ ದಾಖಲೆಯನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ನಮಗೆ ಯಾವುದೇ ಹಕ್ಕು, ಅಧಿಕಾರ, ಸ್ವಾಧೀನ ಇಲ್ಲದೆ ಇದ್ದರೂ ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 2014 ರ ಹಿಂದೆ ಕಂದಾಯವನ್ನು ಪಾವತಿ ಮಾಡಿರುವುದಿಲ್ಲ ಎಂದರೆ ಸರಿ. 1999 ರಲ್ಲಿ ದಾವಾ ಸ್ವತ್ತನ್ನು ಮಾರಾಟ ಮಾಡಿದ ಕಾರಣ ಕಂದಾಯ ಪಾವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**
**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**